ಯಾವುದೆ ದೇವರು–ದೇವಸ್ಥಾನ ಇಲ್ಲದ ಒಂದು ಸರ್ಕಲ್‌ನ ಮೂಲೆಯಲ್ಲಿ ಕುಳಿತು ತರಹೇವಾರಿ ಹೂಗಳ ವ್ಯಾಪಾರ ಮಾಡುತ್ತಿದ್ದ ಆ ಮುದುಕಿಯ ಬಗ್ಗೆ ನನಗೆ ಅಪಾರ ಕುತೂಹಲ. ಮಲ್ಲಿಗೆ, ಸೇವಂತಿಗೆ, ಕನಕಾಂಬರ, ಗುಲಾಬಿ, ಕಾಕಡಾ ಈ ಎಲ್ಲ ಜಾತಿಯ ಬಿಡಿ ಹೂಗಳನ್ನು ನೀರು ಸಿಂಪಡಿಸಿದ ಬಟ್ಟೆಯ ಮೇಲೆ ಹರಡಿಕೊಂಡು ಕುಳಿತಿರುತ್ತಿದ್ದ ಆ ಅಜ್ಜಿಯ ಪಕ್ಕದ ಸ್ಟ್ಯಾಂಡಿನಲ್ಲಿ ತೂಗಾಡುತ್ತಿದ್ದ ಗುಲಾಬಿ ಹೂವಿನ ದೊಡ್ಡ ದೊಡ್ಡ ಮಾಲೆಗಳು ನನ್ನ ಕುತೂಹಲವನ್ನು ಇನ್ನೂ ಇಮ್ಮಡಿಗೊಳಿಸುತ್ತಿದ್ದವು. ಹಬ್ಬದ ಒಂದು ದಿನ ಹೆಂಡತಿ ಪೂಜೆಗೆಂದು ಒಂದಿಷ್ಟು ಮಲ್ಲಿಗೆ ಹೂಗಳನ್ನು ತರಲು ಹೇಳಿದಾಗ ಆ ಮುದುಕಿಯ ಅಂಗಡಿಗೆ ಹೋದ ನಾನು, ಹೂ ಖರೀದಿಸಿ ಮರಳಿ ಬರುವಾಗ ತಡೆಯಲಾರದೇ ನನ್ನ ಮನದಾಳದ ಕುತೂಹಲವನ್ನು ಪ್ರಶ್ನೆ ಮಾಡಿ ಅವಳೆದುರು ಇಟ್ಟಿದ್ದೆ.

"ಅಲ್ಲಾ ಅಜ್ಜಿ, ಎಷ್ಟೊಂದ್ ದಿನದಿಂದ ನಾನೂ ನೋಡ್ತಾನೆ ಇದ್ದೀನಿ, ದಿನಾಲೂ ಈ ಗುಲಾಬಿ ಹೂವಿನ ದೊಡ್ಡ ದೊಡ್ಡ ಮಾಲೀ ಪೋಣಿಸಿ ಹಾಕಿರ್ತೀಯಲ್ಲಾ ಇವನ್ನ ಯಾರಾದ್ರೂ ಕೊಳ್ತಾರಾ? ಒಂದಲ್ಲ, ಎರಡಲ್ಲ ಹತ್ತಿಪ್ಪತ್ತು ಮಾಲಿ ಅದಾವ ಇವು. ಇಷ್ಟೊಂದ್ ಮಾಲಿ, ಮಾರಾಟ ಅಕ್ಕಾವಾ?... "

ಮುದುಕಿ ಒಂದು ಕ್ಷಣ ಯೋಚನೆ ಮಾಡಿ, "ಹೊಟ್ಟೀ ಸಲುವಾಗಿ ಏನರಽ ಮಾಡಬೇಕಲ್ರೀ ಸರ್. ಮಾರಾಟ ಆಗ್ತಾವಂತಽ ಮಾಲೀ ಕಟ್ಟಿ ಇಡತೇವಿ. ಒಮ್ಮೊಮ್ಮೆ ಹೊಕ್ಕಾವ, ಒಮ್ಮೊಮ್ಮೆ ಹಂಗಽ ಉಳಿತಾವ. ಏನ್ ಮಾಡೂದು ಹೇಳ್ರಿ?" ಎನ್ನತ್ತಲೇ ಮಾತು ಮುಂದುವರೆಸಿದಳು, "ಯಾರರೆ ಹೊಗೀ ಹಾಕಿಸಿಕೊಂಡ್ರ ಇವೆಲ್ಲಾ ಮಾಲಿ ಪೂರ ಮಾರಾಟ ಅಕ್ಕಾವ್ರಿ. ಮೊನ್ನೆ ನೋಡ್ರಿ ಅಂವ್ಯಾರೋ ರಾಜಕೀಯದ ದೊಡ್ಡ ಮನಶ್ಯಾ ಹೊಗೀ ಹಾಕಿಸಿಕೊಂಡ್ನಂತ, ಕಟ್ಟಿದ ಮಾಲಿ ಒಂದೂ ಉಳಿಲಿಲ್ಲರಿ. ಬ್ಯಾರೆ ಕಡಿಂದನೂ ಮಾಲಿ ತಂದು ದುಬಾರೀಗೆ ಮಾರಿದ್ವಿ. ಹಂಗ ದಿನಾನೂ ಹೊಗೀ ಹಾಕಸ್ಕೊಳ್ಳೊ ಮಂದಿ ಹೆಚ್ಚಾಗಬೇಕ್ ನೋಡ್ರಿ. ಅಂದ್ರ ಈ ದೊಡ್ಡ ಮಾಲಿ ವ್ಯಾಪಾರ ಜೋರ್ ಅಕ್ಕೈತಿ. ನಮಗೂ ಹೊಟ್ಟೀಗೆ ನಾಕು ಕಾಸು ಸಿಗ್ತಾವು."

ಮುದುಕಿಯ ಮಾತು ಕೇಳಿ ನನಗೆ ಅಚ್ಚರಿಯಾಯ್ತು. ಏನು ಹೇಳಬೇಕು ಅನ್ನುವುದು ತಿಳಿಯಲಾರದೇ ನಾನು ಬೆನ್ನು ತಿರುಗಿಸಿ ಮರಳಿ ಮನೆಗೆ ಹೊಗಬೇಕೆನ್ನುವಷ್ಟರಲ್ಲೇ ಅವಳು ಇನ್ನೂ ಮಾತಾಡುತ್ತಲೇ ಇದ್ದಳು "...ಆದ್ರ ಇವಾಗಿವಾಗ ಹೊಗೀ ಹಾಕಿಸ್ಕೊಳ್ಳೊ ಮಂದೀನೂ ಭಾಳ ಕಡಿಮಿ ಆಗೈತ್ರಿ. ಹಿಂಗಾಗಿ ನಮ್ಮ ವ್ಯಾಪಾರಕ್ಕ ದೊಡ್ಡ ಹೊಡತ ಬಿದ್ದೈತ್ರಿ. ಏನ್ ಮಾಡೂದು ಹೇಳ್ರಿ? ನಮ್ಮ ಸಂಕಟಾ ಯಾರು ಕೇಳ್ತಾರ?... ಇವತ್ತ ಒಬ್ರರಽ ಹೊಗೀ... ಹಾಕಿಸ್ಕೊಂಡ್ರ..." ಅವಳ ಮಾತು ಮುಂದುವರೆದೇ ಇತ್ತು.

ದಿಗಿಲುಗೊಂಡಿದ್ದ ನಾನು ಅದಾಗಲೇ ಮನೆಯ ದಾರಿ ಹಿಡಿದಿದ್ದೆ.

✤